ತಾರೀಖು 28ನೆ ಜನವರಿ 1907.

ನಂ. 6694—ಮ್ಯುನಿಸಿಪಲ್. 368-06—4, ಸ್ ೧೮೯೪ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಶನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನು ನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಸಕಲೇಶಪುರ ಮ್ಯುನಿಸಿಪಾಲಿಟಿಯಲ್ಲಿ ಕಚೇರಿ ಬಂಡಿಗಳು ತಿರುಗಾಡುವುದಕ್ಕೆ ಬಂದು ಬಣಿ ಮಾಡುವುದಕ್ಕೋಸ್ಕರ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನು ನುಸರಿಸಿ ಸಕಲೇಶಪುರ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಸದರಿ ಜಮೀನಿಗೆ ಹಕ್ಕುಬಾಧ್ಯತೆಯುಳ್ಳ ಬೇಕಾದವರ ಹೆಸರು.	ಚತುರ್ಗಡಿ.			
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಸಂಡರಾಬಾದು.	ಈಸೂರು ಸಕಲೇಶಪುರ.	ಸಕಲೇಶಪುರ ಮ್ಯುನಿಸಿಪಾಲಿಟಿ.	ಸಕಲೇಶಪುರದ ಪಾಪಣ್ಣನ ಮಗ ಅಬ್ದುಲ್ ಅಜೀಜ್	ಸಂತೆ ಮೊಳ್ಳಾಗಿ ಉಪಯೋಗಿಸುತ್ತಿರುವ ಖಾಲಿ ನಿವೇಶನ.	೧ ಮೊದಲ ಭಾಗ $10 \times 6 = 60$ ಚದರ ಗಜಗಳು. ಬ ಪಡುವಲ ಭಾಗ $10 \times 3 = 30$ ಚದರ ಗಜಗಳು. $\overline{90}$	೧ ಬ್ರಿಕ್ಕಯ್ಯನ ಮನೆ ಬ ಅಬ್ದುಲ್ ಅಜೀಜನ ಮನೆ	೧ ಅಬ್ದುಲ್ ಅಜೀಜನ ಮನೆ. ಬ ಹುಸೇನ್ ಸಾಬಿಯವರ ಮನೆ ನಿವೇಶನ.	೧ ಖಾಲಿ ಮನೆ ನಿವೇಶನ ಬ ಪಿಟಿಕೋ	೧ ಬೇಲೂರು ಮುಜರಾಬಾದು ರಸ್ತೆಯು ಅಂಚೆ ನಲ್ಲಿ ಸರ್ಕಾರಕ್ಕೆ ಉಳ್ಳುಕೊಂಡಿರುವ ಜಮೀನು. ಬ ಪಿಟಿಕೋ

ತಾರೀಖು 6ನೆ ಫೆಬ್ರವರಿ 1907.

ನಂ. 6912—ಮ್ಯು. 338-06—3, ಸ್ ೧೯೦೬ನೆಯ ಮೇ 4ನೆ ತಾರೀಖಿನ ಮೈಸೂರ ಗೆಜೆಟ್ಟು 391ನೆ ಪುಟದಲ್ಲಿ ಪ್ರಕಟವಾಗಿರುವ 1905ನೆ ಇಸವಿಯ ಮೇ 3ನೆ ತಾರೀಖಿನ 10108—ಮ್ಯು. 524-04—3 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯನ್ನು ರದ್ದುಮಾಡಿ ಬೆಂಗಳೂರು ಪಟ್ಟಣದ ಮ್ಯುನಿಸಿಪಲ್ ಸಭೆಯು ತತ್ಕಾಲದ ವೈಸ್ ಪ್ರೆಸಿಡೆಂಟ್ ಯಾ ಉಪಾಧ್ಯಕ್ಷರನ್ನು, ಬೆಂಗಳೂರು ಪಟ್ಟಣದಲ್ಲಿ ಸ್ವತ್ತುಗಳನ್ನು ಸಂಪಾದಿಸುವುದಕ್ಕೆ, ಸಂಬಂಧಿಸಿದಮಟ್ಟಿಗೆ, 1894ನೆ ಇಸವಿಯ VIIನೆ ನಂಬರ್ ಭೂಸಂಪಾದನೆ ರೆಗ್ಯುಲೇಷನ್ ಮೇರೆಗೆ ಡೆಪ್ಯುಟಿ ಕಮಿಷನರ ಕೆಲಸಗಳನ್ನು ನೆರವೇರಿಸುವುದಕ್ಕೆ ನೇಮಿಸಿ ಇದೆ.

ತಾರೀಖು 8ನೆ ಫೆಬ್ರವರಿ 1907.

ನಂ. ಜೆ. 2389—ಪೋಲೀಸ್ 47-06—8, 1907ನೆ ಇಸವಿಯ ಜನವರಿ 23ನೆ ತಾರೀಖಿನ ಜೆ. 2153—ಪೋಲೀಸು 47-06—6 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಪ್ರೊಬೇಷನರಿ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಟಿಪ್ಪುಸುಲ್ತಾನ್ ಅಲ್ಲಿಖಾರವರಿಗೆ ಕೊಟ್ಟಿದ್ದ ಒಂದು ತಿಂಗಳೂ ಹದಿನೈದು ದಿನಗಳ ಪ್ರಿವಿಲೇಜ್ ರಜಾವನ್ನು ಇದರಿಂದ ಇನ್ನೂ ಒಂದು ತಿಂಗಳಿಗೆ ಹೆಚ್ಚಿಸಿದೆ.

ತಾರೀಖು 12ನೆ ಫೆಬ್ರವರಿ 1907.

ನಂ. ಜೆ. 2417—Regis. 18-06—2, ಸ್ ೧೯೦೭ನೆ ಇಸವಿಯ ಜನವರಿ 9ನೆ ತಾರೀಖಿನ ರೆ. 6747-ಎ. ರೆ. 276-06—5ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯ ಪ್ರಕಾರ ಶೃಂಗೇರಿ ಜಹಗೀರಿಗೆ, ಅಲ್ಲಿ ಕೆಲಸ ಮಾಡುವ ಬಗ್ಗೆ, ಎರವು ಕೊಡಲ್ಪಟ್ಟ ಮಿ॥ ಬಿ. ಸಿ. ಕೃಷ್ಣಶಾಸ್ತ್ರಿಗಳನ್ನು, ಮೈಸೂರು ರಿಜಿಸ್ಟ್ರೇಷನ ರೆಗ್ಯುಲೇಷನಿನ 6ನೆ ಪ್ರಕರಣದ ಮೇರೆಗೆ, ಶೃಂಗೇರಿ ಸಬ್ ಡಿವಿಜನ್ನಿನ ಸಬ್ ರಿಜಿಸ್ಟ್ರಾರಾಗಿ ಮೊಕರರ್ರಾಡಲು ಮೈಸೂರು ಶ್ರೀವರ್ಮ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.